1587 ಚುಕ್ಕೆ SL NO:-64 ದಿ:-17-03-2026

## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಟಿ ಎನ್ ಜವರಾಯಿಗೌಡ ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವಕ್ಕೆ ಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-

**ಶೂನ್ಯ ವೇಳೆ ಪ್ರಸ್ತಾವ:-**

"ವಯೋ ವಂದನಾದಡಿ ವೃದ್ಧರಿಗಿಲ್ಲ ಚಿಕಿತ್ಸೆ" ಎಂಬ ಶಿರೋನಾಮೆಯಡಿ ದಿನಾಂಕ: 16-3-2026 ರಂದು ಪ್ರಜಾವಾಣಿ ಪತ್ರಿಯಲ್ಲಿ ವಿಶೇಷ ವರದಿಯಾಗಿದೆ. ರಾಜ್ಯದಲ್ಲಿ ಆಯುಷ್ಮಾನ್ "ವಯೋ ವಂದನಾ" ಯೋಜನೆ ಜಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆದೇಶ ಹೊರಡಿಸಿ ಒಂದು ವರ್ಷ ಕಳೆದರೂ ಈ ಯೋಜನೆ ಇನ್ನು ಅನುಷ್ಠಾನಗೊಂಡಿಲ್ಲ. ಕೇಂದ್ರ ಸರ್ಕಾರವು ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯನ್ನು (ಎ.ಬಿ.ಪಿ.ಎಂ.ಜೆ.ವೈ.) ವಿಸ್ತರಿಸಿ, 70 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರಿಗೂ ಅನ್ವಯವಾಗುವಂತೆ ಯೋಜನೆ ರೂಪಿಸಿತ್ತು. ಇದು ರೂ. 5 ಲಕ್ಷದವರಿಗೆ ಆರೋಗ್ಯ ವಿಮೆಯ ಭರವಸೆ ಒದಗಿಸಲಿದೆ. ರಾಜ್ಯದಲ್ಲಿ 2, 16, 265 ಈ ಯೋಜನೆಯಡಿ ಈಗಾಗಲೇ ಕಾರ್ಡ್ ಪಡೆದುಕೊಂಡಿದ್ದಾರೆ. ಆದರೆ ಯೋಜನೆ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ. ರಾಜ್ಯದಲ್ಲಿ ಜಾರಿಯಲ್ಲಿರುವ "ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ" ಯೋಜನೆಯಡಿ ಬಿ.ಪಿ.ಎಲ್. ಕುಟುಂಬದ ಎಲ್ಲಾ ಸದಸ್ಯರಿಗೆ ಸೇರಿ ರೂ. 5 ಲಕ್ಷದವರೆಗೆ ಆರೋಗ್ಯ ವಿಮೆ ಒದಗಿಸಿದರೆ "ಆಯುಷ್ಮಾನ್ ವಯೋ ವಂದನಾ " ಯೋಜನೆಯಡಿ 70 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ರೂ. 5 ಲಕ್ಷದವರೆಗೆ ಆರೋಗ್ಯ ವಿಮೆ ನೀಡಲಾಗುತ್ತದೆ. ಕಾರ್ಡ್ ಹೊಂದಿದ್ದರೂ ಚಿಕಿತ್ಸೆ ಸಿಗದ ಪರಿಣಾಮ ವಯೋ ವೃದ್ಧರು ಲಕ್ಷಾಂತರ ರೂಪಾಯಿ ಚಿಕಿತ್ಸಾ ವೆಚ್ಚ ಭರಿಸುವುದು ಅನಿವಾರ್ಯವಾಗಿದೆ. ಈ ಯೋಜನೆಯಡಿ ಕಾರ್ಡ್ ಪಡೆದಿರುವ 70 ವರ್ಷ ಮೇಲ್ಪಟ್ಟ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ ನಡೆಸುತ್ತಿದ್ದಾರೆ. ಸರ್ಕಾರ ಏಕೆ ಈ ಯೋಜನೆಯನ್ನು ವಿಳಂಬ ಮಾಡುತ್ತಿದೆ. ಕೇಂದ್ರ ಸರ್ಕಾರವು ಇಡೀ ದೇಶಕ್ಕೆ ಇಂತಹದೊಂದು ಮಹತ್ವದ ಯೋಜನೆ ಜಾರಿಗೊಳಿಸಿದರೂ ಸಹ ರಾಜ್ಯ ಸರ್ಕಾರ 2025 ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರದ ಆದೇಶ ಹೊರಡಿಸಿ, ಒಂದು ವರ್ಷವಾದರೂ ಈ ಯೋಜನೆಯನ್ನು ಜಾರಿಗೊಳಿಸಿಲ್ಲ. ವಯೋವೃದ್ಧರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೇ, ಈ ವಯೋ ವಂದನಾ ಯೋಜನೆಗೆ ಕೇಂದ್ರ ಸರ್ಕಾರದ ಅನುದಾನ ಇಲ್ಲಿಯ ತನಕ ಎಷ್ಟು ಬಂದಿದೆ. ಬಂದಿರುವ ಅನುದಾನವನ್ನು ರಾಜ್ಯ ಸರ್ಕಾರ ಈ ಯೋಜನೆಗೆ ನೀಡಿ ಯಾಕೆ ಅನುಷ್ಠಾನಗೊಳಿಸಿಲ್ಲ. ಇದಕ್ಕೆಲ್ಲಾ ಕಾರಣಗಳೇನು ಎಂಬುದರ ಬಗ್ಗೆ ವಿವರಣೆ ನೀಡಬೇಕು. ರಾಜ್ಯದಲ್ಲಿ 70 ವರ್ಷ ಮೇಲ್ಪಟ್ಟ ಎಷ್ಟೋ ವಯೋ ವೃದ್ಧರು ಬಡ, ಮಧ್ಯಮ, ಕೂಲಿ ಕಾರ್ಮಿಕರು, ರೈತಾಪಿ ವರ್ಗದವರು ಆಗಿದ್ದು, ರೂ. 5 ಲಕ್ಷ ಆರೋಗ್ಯ ವಿಮೆ ಒದಗಿಸುವ ಇಂತಹ ಮಹತ್ವದ ಯೋಜನೆಯನ್ನು ತಕ್ಷಣವೇ ಅನುಷ್ಠಾನಗೊಳಿಸಬೇಕೆಂದು ಪ್ರಸ್ತಾಪಿಸಿರುತ್ತಾರೆ.

**ಆರೋಗ್ಯ ಮತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:**

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ (AB-PMJAY CM's ArK) ಹಿರಿಯ ನಾಗರಿಕರ ಯೋಜನೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 386 ಸಿಜಿಇ 2025, ದಿನಾಂಕ: 17.09.2025 ಅನ್ನು ಹೊರಡಿಸಲಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ

ಕರ್ನಾಟಕ ಯೋಜನೆಯಡಿಯಲ್ಲಿ 2965 ಸರ್ಕಾರಿ ಆಸ್ಪತ್ರೆಗಳು ಮತ್ತು 541 ಖಾಸಗಿ ಆಸ್ಪತ್ರೆಗಳು ನೊಂದಾವಣೆಯಾಗಿರುತ್ತವೆ. ಸದರಿ ಯೋಜನೆಯಡಿಯಲ್ಲಿ ನೊಂದಾವಣೆಗೊಂಡಿರುವ ಆಸ್ಪತ್ರೆಗಳ ವಯೋ ವಂದನಾ ಯೋಜನೆಗೂ ಅನ್ವಯಿಸುತ್ತವೆ.

70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ AB-PMJAY ಅಡಿಯಲ್ಲಿ ವಯೋವಂದನಾ ಯೋಜನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಅಸ್ತಿತ್ವದಲ್ಲಿರುವ ಗರಿಷ್ಠ 69,01,440 SECC (Socio Economic and Caste Census) ಕುಟುಂಬಗಳ ಮಿತಿಗೊಳಪಟ್ಟು ಪ್ರತಿ ಕುಟುಂಬಕ್ಕೆ ರೂ.1052/-ಗಳ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ವರ್ಷಕ್ಕೆ ರೂ.75.70/- ಮತ್ತು ಗುರುತಿಸಲಾಗುವ ಪ್ರತಿ ಹೊಸ ಕುಟುಂಬಕ್ಕೆ ರೂ.1052/-ಗಳ ಅನುದಾನ ಮಾತ್ರ ಒದಗಿಸಲಾಗುತ್ತದೆ. ಸದರಿ ಅನುದಾನವನ್ನು ಕೇಂದ್ರ ಸರ್ಕಾರವು ಬಳಕೆಯಾಧರಿಸಿ ಬಿಡುಗಡೆ ಮಾಡುತ್ತದೆ. ಈ ಯೋಜನೆಯ ಅನುಷ್ಠಾನ ಪ್ರಕ್ರಿಯೆಯಾಗಿ AB-PMJAY CMs ArK ಯೋಜನೆ ಯಡಿಯಲ್ಲಿ ಅಸ್ತಿತ್ವದಲ್ಲಿರುವ ಮತ್ತು ಹೊಸ ಕುಟುಂಬಗಳನ್ನು ಗುರುತಿಸುವ ಅಗತ್ಯವಿದೆ. ಆದುದರಿಂದ, SECC ಮಾನದಂಡಗಳನ್ನು ಅಳವಡಿಸಿ ಗುರುತಿಸಲಾದ 69,01,440 ಕುಟುಂಬಗಳ ಮಾಹಿತಿಯನ್ನು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದ್ದು, ಪ್ರಾಧಿಕಾರದ ಹಂತದಲ್ಲಿ ಮುಂದಿನ ಕ್ರಮ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಆದಾಗ್ಯೂ, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ನೊಂದಾವಣೆಯಾಗಿರುವ ಆಸ್ಪತ್ರೆಗಳಲ್ಲಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು ಈ ಕೆಳಗಿನಂತೆ ವೈದ್ಯಕೀಯ ಚಿಕಿತ್ಸೆ/ಶಸ್ತ್ರ ಚಿಕಿತ್ಸೆ ಪಡೆಯಬಹುದಾಗಿದೆ.

- ಆದ್ಯತಾ ಮನೆ ಮಂದಿ (PHH) ಹಾಗೂ ಆಧಾರ್ ಕಾರ್ಡ್ ಹೊಂದಿರುವ 70 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲಾ ಹಿರಿಯ ನಾಗರೀಕರನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ನಿವಾಸಿಗಳು ಸದರಿ ಯೋಜನೆಯಡಿ ನೊಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವಾರ್ಷಿಕ ರೂ.5.00 ಲಕ್ಷಗಳವರೆಗೆ ನಗದು ರಹಿತ ಚಿಕಿತ್ಸೆ ಪಡೆಯುವ ಸೌಲಭ್ಯ ಈಗಾಗಲೇ ಲಭ್ಯವಿದೆ.
- ಆಧಾರ್ ಕಾರ್ಡ್ ಜೊತೆಗೆ ಇತರೆ (NPHH) ಕಾರ್ಡ್ ಹೊಂದಿರುವ ವ್ಯಕ್ತಿಯು ಎಲ್ಲಾ ನೋಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ.
- ಯಾವುದೇ ಪಡಿತರ ಚೀಟಿ ಇಲ್ಲದೆ ಕೇವಲ ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಯು ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ
- ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ ಅಧಿಸೂಚಿತ ಪಟ್ಟಿಯಲ್ಲಿ 1650 ಶಸ್ತ್ರ ಚಿಕಿತ್ಸೆಗೊಳಪಟ್ಟಂತೆ ಚಿಕಿತ್ಸಾ ವಿಧಾನಗಳಿರುತ್ತದೆ.
- 251 ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳು 934 ತೃತೀಯ ಹಂತದ ಚಿಕಿತ್ಸಾ ವಿಧಾನಗಳು ಮತ್ತು 171 ತುರ್ತು ಚಿಕಿತ್ಸಾ ವಿಧಾನಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ
- ರಾಜ್ಯದಲ್ಲಿ ಪ್ರಸ್ತುತ ಎಂಪ್ಯಾನಲ್ ಆಗಿರುವ ಆಸ್ಪತ್ರೆಗಳಲ್ಲಿ ಇದುವರೆವಿಗೂ ಸದರಿ ಯೋಜನೆಯಡಿ 2018 ರಿಂದ ಫೆಬ್ರವರಿ 2026ರವರೆಗೆ 13,04,502 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ

- ರಾಜ್ಯ ಸರ್ಕಾರವು 70 ವರ್ಷ ಮೇಲ್ಪಟ್ಟ ವಯೋ ವೃದ್ಧರ ಆರೋಗ್ಯ ವಿಮೆ ಕುರಿತು ಕಾಳಜಿ ಹೊಂದಿದ್ದು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಆಕುಕ 63 ಎಸ್‌ಬಿವಿ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# <u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕೆ. ಪ್ರತಾಪಸಿಂಹ ನಾಯಕ್ ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

**ಶೂನ್ಯ ವೇಳೆಯ ಪ್ರಸ್ತಾವ:-**

ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಗೆ ಸಂಬಂಧಿಸಿದಂತೆ ಕಳೆದ ವರ್ಷವೇ ಆದೇಶ ಹೊರಡಿಸಲಾಗಿದ್ದರೂ ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಯೋಜನೆಯಡಿ ಕಾರ್ಡ್ ಪಡೆದಿರುವ 70 ವರ್ಷ ಮೇಲ್ಪಟ್ಟ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ ನಡೆಸುತ್ತಿದ್ದಾರೆ. 2025 ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ, ಯೋಜನೆ ಜಾರಿಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಸೂಕ್ತ ದತ್ತಾಂಶದ ಕೊರತೆ ಹಾಗೂ ಬೇರೆ ಹಲವು ಕಾರಣಗಳಿಂದಾಗಿ ಯೋಜನೆಯನ್ನು ಇನ್ನೂ ಅನುಷ್ಠಾನ ಮಾಡಿಲ್ಲ. ಇದರ ಅರಿವಿಲ್ಲದ ವೃದ್ಧರು ಯೋಜನೆಯಡಿ ಚಿಕಿತ್ಸೆ ನಿರಾಕರಿಸಿರುವ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ವಾಗ್ವಾದಕ್ಕೆ ಇಳಿಯುತ್ತಿದ್ದಾರೆ.

'ಆಯುಷ್ಮಾನ್ ವಯೋ ವಂದನಾ' ಯೋಜನೆಯಡಿ 70 ವರ್ಷ ಮೇಲ್ಪಟ್ಟ ಎಲ್ಲರೂ ಈ ಯೋಜನೆಯಡಿ ಬರಲಿದ್ದು, ನೋಂದಣಿಗೆ ಆಧಾರ್ ಕಾರ್ಡ್ ಮಾತ್ರ ಅಗತ್ಯ. ಯೋಜನೆಯಡಿ ಚಿಕಿತ್ಸೆಗೆ 'ವಯೋ ವಂದನಾ' ಕಾರ್ಡ್ ಕಡ್ಡಾಯವಾಗಿದೆ. ಆದ್ದರಿಂದ ರಾಜ್ಯದಲ್ಲಿಯೂ 70 ವರ್ಷ ಮೇಲ್ಪಟ್ಟವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಡ್ ಪಡೆದಿದ್ದಾರೆ. ಎನ್‌ಎಚ್‌ಎ ಪೋರ್ಟಲ್ ಮೂಲಕವೇ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಕಾರ್ಡ್ ಪಡೆಯಲು ಅವಕಾಶ ನೀಡಲಾಗಿದೆ. ರಾಜ್ಯದಲ್ಲಿ ಎರಡು ಲಕ್ಷಕ್ಕೂ ಅಧಿಕ ಮಂದಿ ಈಗಾಗಲೇ 'ವಯೋ ವಂದನಾ' ಕಾರ್ಡ್ ಪಡೆದಿದ್ದಾರೆ. ಆದರೆ, ಯೋಜನೆ ಇನ್ನೂ ಜಾರಿಯಾಗದ ಪರಿಣಾಮ ಈ ಕಾರ್ಡ್‌ಗಳು ನಿರರ್ಥಕವಾಗುತ್ತಿವೆ. ಕಾರ್ಡ್ ಹೊಂದಿದ್ದರೂ ಚಿಕಿತ್ಸೆ ಸಿಗದ ಪರಿಣಾಮ ಲಕ್ಷಾಂತರ ರೂಪಾಯಿ ಚಿಕಿತ್ಸಾ ವೆಚ್ಚ ಭರಿಸುವುದು ಅನಿವಾರ್ಯವಾಗಿದೆ.

ಆದುದ್ದರಿಂದ, 'ಆಯುಷ್ಮಾನ್ ವಯೋ ವಂದನಾ' ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಶೀಘ್ರವೇ ಅನುಷ್ಠಾನಗೊಳಿಸಬೇಕು ಹಾಗೂ ತಮ್ಮ ಜೀವಿತಾವಧಿಯ ಸಂಧ್ಯಾಕಾಲದಲ್ಲಿರುವ 70 ವರ್ಷ ಮೇಲ್ಪಟ್ಟ ಎಲ್ಲಾ ಹಿರಿಯ ನಾಗರೀಕರಿಗೂ ಸಕಾಲದಲ್ಲಿ ಮತ್ತು ಸ್ಥಳೀಯವಾಗಿ ಗುಣಮಟ್ಟದ ಹಾಗೂ ಶ್ರೇಷ್ಠದರ್ಜೆಯ ಚಿಕಿತ್ಸೆ ದೊರೆಯುವಂತೆ ಮಾಡಲು ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಎಂದು ಪ್ರಸ್ತಾಪಿಸಿರುತ್ತಾರೆ.

**ಆರೋಗ್ಯ ಮತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:**

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ (AB-PMJAY CM's ArK) ಹಿರಿಯ ನಾಗರಿಕರ

ಯೋಜನೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 386 ಸಿಜಿಇ 2025, ದಿನಾಂಕ: 17.09.2025 ಅನ್ನು ಹೊರಡಿಸಲಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ 2965 ಸರ್ಕಾರಿ ಆಸ್ಪತ್ರೆಗಳು ಮತ್ತು 541 ಖಾಸಗಿ ಆಸ್ಪತ್ರೆಗಳು ನೊಂದಾವಣೆಯಾಗಿರುತ್ತವೆ. ಸದರಿ ಯೋಜನೆಯಡಿಯಲ್ಲಿ ನೊಂದಾವಣೆಗೊಂಡಿರುವ ಆಸ್ಪತ್ರೆಗಳ ವಯೋ ವಂದನಾ ಯೋಜನೆಗೂ ಅನ್ವಯಿಸುತ್ತವೆ.

70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ AB-PMJAY ಅಡಿಯಲ್ಲಿ ವಯೋವಂದನಾ ಯೋಜನೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಅಸ್ತಿತ್ವದಲ್ಲಿರುವ ಗರಿಷ್ಠ 69,01,440 SECC (Socio Economic and Caste Census) ಕುಟುಂಬಗಳ ಮಿತಿಗೊಳಪಟ್ಟು ಪ್ರತಿ ಕುಟುಂಬಕ್ಕೆ ರೂ.1052/-ಗಳ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ವರ್ಷಕ್ಕೆ ರೂ.75.70/- ಮತ್ತು ಗುರುತಿಸಲಾಗುವ ಪ್ರತಿ ಹೊಸ ಕುಟುಂಬಕ್ಕೆ ರೂ.1052/-ಗಳ ಅನುದಾನ ಮಾತ್ರ ಒದಗಿಸಲಾಗುತ್ತದೆ. ಸದರಿ ಅನುದಾನವನ್ನು ಕೇಂದ್ರ ಸರ್ಕಾರವು ಬಳಕೆಯಾಧರಿಸಿ ಬಿಡುಗಡೆ ಮಾಡುತ್ತದೆ. ಈ ಯೋಜನೆಯ ಅನುಷ್ಠಾನ ಪ್ರಕ್ರಿಯೆಯಾಗಿ AB-PMJAY CMs ArK ಯೋಜನೆ ಯಡಿಯಲ್ಲಿ ಅಸ್ತಿತ್ವದಲ್ಲಿರುವ ಮತ್ತು ಹೊಸ ಕುಟುಂಬಗಳನ್ನು ಗುರುತಿಸುವ ಅಗತ್ಯವಿದೆ. ಆದುದರಿಂದ, SECC ಮಾನದಂಡಗಳನ್ನು ಅಳವಡಿಸಿ ಗುರುತಿಸಲಾದ 69,01,440 ಕುಟುಂಬಗಳ ಮಾಹಿತಿಯನ್ನು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದ್ದು, ಪ್ರಾಧಿಕಾರದ ಹಂತದಲ್ಲಿ ಮುಂದಿನ ಕ್ರಮ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಆದಾಗ್ಯೂ, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ನೊಂದಾವಣೆಯಾಗಿರುವ ಆಸ್ಪತ್ರೆಗಳಲ್ಲಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು ಈ ಕೆಳಗಿನಂತೆ ವೈದ್ಯಕೀಯ ಚಿಕಿತ್ಸೆ/ಶಸ್ತ್ರ ಚಿಕಿತ್ಸೆ ಪಡೆಯಬಹುದಾಗಿದೆ.

- ಆದ್ಯತಾ ಮನೆ ಮಂದಿ (PHH) ಹಾಗೂ ಆಧಾರ್ ಕಾರ್ಡ್ ಹೊಂದಿರುವ 70 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲಾ ಹಿರಿಯ ನಾಗರೀಕರನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ನಿವಾಸಿಗಳು ಸದರಿ ಯೋಜನೆಯಡಿ ನೊಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವಾರ್ಷಿಕ ರೂ.5.00 ಲಕ್ಷಗಳವರೆಗೆ ನಗದು ರಹಿತ ಚಿಕಿತ್ಸೆ ಪಡೆಯುವ ಸೌಲಭ್ಯ ಈಗಾಗಲೇ ಲಭ್ಯವಿದೆ.
- ಆಧಾರ್ ಕಾರ್ಡ್ ಜೊತೆಗೆ ಇತರೆ (NPHH) ಕಾರ್ಡ್ ಹೊಂದಿರುವ ವ್ಯಕ್ತಿಯು ಎಲ್ಲಾ ನೋಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ.

- ಯಾವುದೇ ಪಡಿತರ ಚೀಟಿ ಇಲ್ಲದೆ ಕೇವಲ ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಯು ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ
- ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ ಅಧಿಸೂಚಿತ ಪಟ್ಟಿಯಲ್ಲಿ 1650 ಶಸ್ತ್ರ ಚಿಕಿತ್ಸೆಗೊಳಪಟ್ಟಂತೆ ಚಿಕಿತ್ಸಾ ವಿಧಾನಗಳಿರುತ್ತದೆ.
- 251 ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳು, 934 ತೃತೀಯ ಹಂತದ ಚಿಕಿತ್ಸಾ ವಿಧಾನಗಳು ಮತ್ತು 171 ತುರ್ತು ಚಿಕಿತ್ಸಾ ವಿಧಾನಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ
- ರಾಜ್ಯದಲ್ಲಿ ಪ್ರಸ್ತುತ ಎಂಪ್ಯಾನಲ್ ಆಗಿರುವ ಆಸ್ಪತ್ರೆಗಳಲ್ಲಿ ಇದುವರೆವಿಗೂ ಸದರಿ ಯೋಜನೆಯಡಿ 2018ರಿಂದ ಫೆಬ್ರುವರಿ 2026ರವರೆಗೆ 13,04,502 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ
- ರಾಜ್ಯ ಸರ್ಕಾರವು 70 ವರ್ಷ ಮೇಲ್ಪಟ್ಟ ವಯೋ ವೃದ್ಧರ ಆರೋಗ್ಯ ವಿಮೆ ಕುರಿತು ಕಾಳಜಿ ಹೊಂದಿದ್ದು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಆಕುಕ 63 ಎಸ್‌ಬಿವಿ 2026

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು, ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

**ಶೂನ್ಯವೇಳೆ ಪ್ರಸ್ತಾಪ:-**

'ಪ್ರಜಾವಾಣಿ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ **'ವಯೋ ವಂದನಾ'ದಡಿ ವೃದ್ಧರಿಗಿಲ್ಲ ಚಿಕಿತ್ಸೆ'** ಎಂಬ ಶೀರ್ಷಿಕೆಯಡಿ ಪ್ರಕಟವಾದ ವಿಷಯದಡಿಯಲ್ಲಿ ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಗೆ ಸಂಬಂಧಿಸಿದಂತೆ ಕಳೆದ ವರ್ಷವೇ ಆದೇಶ ಹೊರಡಿಸಲಾಗಿದ್ದರೂ ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ಯೋಜನೆಯಡಿ ಕಾರ್ಡ್ ಪಡೆದಿರುವ 70 ವರ್ಷ ಮೇಲ್ಪಟ್ಟ ಫಲಾನುಭವಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಅಲೆದಾಟ ನಡೆಸುತ್ತಿದ್ದಾರೆ. 2025ರ ಸೆಪ್ಟೆಂಬರ್ ತಿಂಗಳಲ್ಲಿ ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ, ಯೋಜನೆ ಜಾರಿಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿತ್ತು. ಆದರೆ ಇನ್ನೂ ಕೂಡ ಅನುಷ್ಠಾನ ಮಾಡಿಲ್ಲ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯನ್ನು ಕೇಂದ್ರ ಸರ್ಕಾರವು ವಿಸ್ತರಿಸಿ 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಅನ್ವಯವಾಗುವಂತೆ ರೂಪಿಸಿತ್ತು. ಇದು ರೂ. 5.00 ಲಕ್ಷದ ವರೆಗೆ ಆರೋಗ್ಯ ವಿಮೆ ಭರವಸೆಯ ಪ್ರಮುಖ ಯೋಜನೆಯಾಗಿದೆ. ಈ ಯೋಜನೆಯಡಿ ರಾಜ್ಯಾದ್ಯಂತ ಈಗಾಗಲೇ 2,16,388 (ಎರಡು ಲಕ್ಷದ ಹದಿನಾರು ಸಾವಿರದ ಮುನ್ನೂರ ಎಂಬತ್ತ ಎಂಟು) ಜನ ಕಾರ್ಡ್ ಗೆ ಅರ್ಜಿಸಲ್ಲಿಸಿರುತ್ತಾರೆ ಮತ್ತು 2,16,265 (ಎರಡು ಲಕ್ಷದ ಹದಿನಾರು ಸಾವಿರದ ಇನ್ನೂರ ಆರುವತ್ತೈದು) ಜನರಿಗೆ ಕಾರ್ಡ್ ನ್ನು ವಿತರಿಸಲಾಗಿರುತ್ತದೆ. ಆದರೆ ಈ ಯೋಜನೆ ಜಾರಿಯಾಗದೇ ಇರುವುದರಿಂದ ಈ ಕಾರ್ಡ್ ಊಟಕ್ಕಿಲ್ಲದ ಉಪ್ಪಿನ ಕಾಯಿಯಂತಾಗಿದೆ.

ಇಂದಿನ ಆದುನಿಕ ಚಿಕಿತ್ಸಾ ವೆಚ್ಚದಲ್ಲಿ ವಯೋ ವೃದ್ಧರು ಚಿಕಿತ್ಸೆ ಪಡೆಯುವುದು ಕನಸಿನ ಮಾತಾಗಿದೆ. ಇಂತಹ ಸಂದರ್ಭದಲ್ಲಿ ಸದರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದ್ದಲ್ಲಿ ರಾಜ್ಯದ ಹಲವು ಹಿರಿಯನಾಗರಿಕರಿಗೆ ತಮ್ಮ ಸಂಧ್ಯಾ ಕಾಲದಲ್ಲಿ ಚಿಕಿತ್ಸೆ ಪಡೆಲು ತುಂಬಾ ಸಹಕಾರಿಯಾಗಲಿದೆ. ಆದ್ದರಿಂದ ಸರ್ಕಾರವು 'ಆಯುಷ್ಮಾನ್ ವಯೋ ವಂದನಾ' ಯೋಜನೆಯನ್ನು ಕೂಡಲೇ ಅನುಷ್ಠಾನ ಮಾಡಬೇಕೆಂದು ಪ್ರಸ್ತಾಪಿಸಲಾಗಿದೆ.

**ಆರೋಗ್ಯ ಮತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ (AB-PMJAY CM's-ArK) ಹಿರಿಯ ನಾಗರಿಕರ ಯೋಜನೆಯ

ಅನುಷ್ಠಾನಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 386 ಸಿಜಿಇ 2025, ದಿನಾಂಕ:17.09.2025 ಅನ್ನು ಹೊರಡಿಸಲಾಗಿದ್ದು, ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ 2965 ಸರ್ಕಾರಿ ಆಸ್ಪತ್ರೆಗಳು ಮತ್ತು 541 ಖಾಸಗಿ ಆಸ್ಪತ್ರೆಗಳು ನೊಂದಾವಣೆಯಾಗಿರುತ್ತವೆ. ಸದರಿ ಯೋಜನೆಯಡಿಯಲ್ಲಿ ನೊಂದಾವಣೆಗೊಂಡಿರುವ ಆಸ್ಪತ್ರೆಗಳೇ ವಯೋವಂದನಾ ಯೋಜನೆಗೂ ಅನ್ವಯಿಸುತ್ತವೆ.

70 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ AB-PMJAY ಅಡಿಯಲ್ಲಿ ವಯೋವಂದನಾ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅಸ್ತಿತ್ವದಲ್ಲಿರುವ ಗರಿಷ್ಠ 69,01,440 SECC (Socio Economic and Caste Census) ಕುಟುಂಬಗಳ ಮಿತಿಗೊಳಪಟ್ಟು ಪ್ರತಿ ಕುಟುಂಬಕ್ಕೆ ರೂ.1052/-ಗಳ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ವರ್ಷಕ್ಕೆ ರೂ.75.70/- ಮತ್ತು ಗುರುತಿಸಲಾಗುವ ಪ್ರತಿ ಹೊಸ ಕುಟುಂಬಕ್ಕೆ ರೂ.1052/-ಗಳ ಅನುದಾನ ಮಾತ್ರ ಒದಗಿಸಲಾಗುತ್ತದೆ. ತತ್ಸಂಬಂಧ, AB-PMJAY CMs ArK ಯೋಜನೆ ಯಡಿಯಲ್ಲಿ ಅಸ್ತಿತ್ವದಲ್ಲಿರುವ ಮತ್ತು ಹೊಸ ಕುಟುಂಬಗಳನ್ನು ಗುರುತಿಸುವ ಅಗತ್ಯವಿದೆ. ಆದುದರಿಂದ, SECC ಮಾನದಂಡಗಳನ್ನು ಅಳವಡಿಸಿ ಗುರುತಿಸಲಾದ 69,01,440 ಕುಟುಂಬಗಳ ಮಾಹಿತಿಯನ್ನು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದ್ದು, ಪ್ರಾಧಿಕಾರದ ಹಂತದಲ್ಲಿ ಮುಂದಿನ ಕ್ರಮ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಆದಾಗ್ಯೂ, ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ ನೊಂದಾವಣೆಯಾಗಿರುವ ಆಸ್ಪತ್ರೆಗಳಲ್ಲಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರು ಈ ಕೆಳಗಿನಂತೆ ವೈದ್ಯಕೀಯ ಚಿಕಿತ್ಸೆ/ಶಸ್ತ್ರ ಚಿಕಿತ್ಸೆ ಪಡೆಯಬಹುದಾಗಿದೆ.

- ಅರ್ಹತಾ ಮನೆ ಮಂದಿ (PHH) ಹಾಗೂ ಆಧಾರ್ ಕಾರ್ಡ್ ಹೊಂದಿರುವ 70 ವರ್ಷ ಮೇಲ್ಪಟ್ಟ ರಾಜ್ಯದ ಎಲ್ಲಾ ಹಿರಿಯ ನಾಗರೀಕರನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ನಿವಾಸಿಗಳು ಸದರಿ ಯೋಜನೆಯಡಿ ನೊಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವಾರ್ಷಿಕ ರೂ.5.00 ಲಕ್ಷಗಳವರೆಗೆ ನಗದು ರಹಿತ ಚಿಕಿತ್ಸೆ ಪಡೆಯುವ ಸೌಲಭ್ಯ ಈಗಾಗಲೇ ಲಭ್ಯವಿದೆ.
- ಆಧಾರ್ ಕಾರ್ಡ್ ಜೊತೆಗೆ ಇತರೆ (NPHH) ಕಾರ್ಡ್ ಹೊಂದಿರುವ ವ್ಯಕ್ತಿಯು ಎಲ್ಲಾ ನೋಂದಾಯಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ.
- ಯಾವುದೇ ಪಡಿತರ ಚೀಟಿ ಇಲ್ಲದ ಕೇವಲ ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಯು ಸಹ-ಪಾವತಿ ಆಧಾರದ ಮೇಲೆ ಪ್ಯಾಕೇಜ್ ದರಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದು. ಸರ್ಕಾರವು ಶೇ. 30% ಭರಿಸುತ್ತದೆ ಮತ್ತು 70% ಫಲಾನುಭವಿಗಳು ಭರಿಸಬೇಕಾಗುತ್ತದೆ

- ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ ಅಧಿಸೂಚಿತ ಪಟ್ಟಿಯಲ್ಲಿ 1650 ಶಸ್ತ್ರ ಚಿಕಿತ್ಸೆಗೊಳಪಟ್ಟಂತೆ ಚಿಕಿತ್ಸಾ ವಿಧಾನಗಳಿರುತ್ತದೆ.
- 251 ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳು, 934 ತೃತೀಯ ಹಂತದ ಚಿಕಿತ್ಸಾ ವಿಧಾನಗಳು ಮತ್ತು 171 ತುರ್ತು ಚಿಕಿತ್ಸಾ ವಿಧಾನಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.
- ರಾಜ್ಯದಲ್ಲಿ ಪ್ರಸ್ತುತ ಎಂಪ್ಯಾನಲ್ ಆಗಿರುವ ಆಸ್ಪತ್ರೆಗಳಲ್ಲಿ ಇದುವರೆವಿಗೂ ಸದರಿ ಯೋಜನೆಯಡಿ 2018ರಿಂದ ಫೆಬ್ರುವರಿ 2026ರವರೆಗೆ 13,04,502 ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ.
- ರಾಜ್ಯ ಸರ್ಕಾರವು 70 ವರ್ಷ ಮೇಲ್ಪಟ್ಟ ವಯೋ ವೃದ್ಧರ ಆರೋಗ್ಯ ವಿಮೆ ಕುರಿತು ಕಾಳಜಿ ಹೊಂದಿದ್ದು ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಆಕುಕ 63 ಎಸ್‌ಬಿವಿ 2026

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು